- -                    ಅಸಲು ದಾವೆ ಸಂ: **28/2018**        ಡಿ.ಡಬ್ಲು-**2**

**ದಿ: 30-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ.ಎಸ್. ವಕೀಲರಿಂದ:**

1. ನಾನು ನನ್ನ ಅಧಿಕೃತ ಆಧಾರದ ಮೇರೆಗೆ ಇವತ್ತು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಿಂದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬೇಕೆಂದು ನನಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಆ ಅಧಿಕಾರಪತ್ರವನ್ನು ಸಾಕ್ಷಿ ಪ್ರಮಾಣ ಪತ್ರದೊಂದಿಗೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಿಂದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬೇಕೆಂದು ನನಗೆ

ಅಧಿಕಾರ ಪತ್ರವನ್ನು ನೀಡಿರುತ್ತಾರೆ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿದ್ದಾರೆಯೇ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿರುತ್ತದೆ ಮತ್ತು ನಾನು ಅದನ್ನು ಓದಿರುತ್ತೇನೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಿಂದ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಕೊಟ್ಟಿರುತ್ತಾರೆ ಮತ್ತು ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದು ಹೇಳಿ ಬರೆಸಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಿಂದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ಕೊಟ್ಟಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರ ಸಾಕ್ಷಿ ಪ್ರಮಾಣ ಪತ್ರವ ವನ್ನು ತೋರಿಸಿ ಅದರ ಜೊತೆಗೆ ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಕಾಣುತ್ತಿಲ್ಲ ಎನ್ನುತ್ತಾರೆ.

2. ಈ ದಾವೆಯನ್ನು ಶಿವಪ್ಪ, ಯಲ್ಲಪ್ಪ , ಈರಣ್ಣ ಇವರು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯ ಮೇಲೆ ಶಾಶ್ವತ ತಡೆಯಾಜ್ಞೆ ಕೋರಿ ದಾವೆ ಜಮೀನು ಸರ್ವೆ ನಂಬರ್ 8/ಬ, ವಿಸ್ತೀರ್ಣ 06 ಎಕರೆ 27 ಗುಂಟೆ ಊಟಿ ಸೀಮಾದಲ್ಲಿದ್ದು ಇದರ ಮೇಲೆ ಮಾಡಿರುತ್ತಾರೆ. ಸರ್ವೆ ನಂಬರ್ 8/ಬ ರ ಮೇಲೆ ಮಾಡಿರುವ ದಾವದ ಬಗ್ಗೆ ನಾನು ಓದಿರುತ್ತೇನೆ. ಸಾಕ್ಷಿಗೆ ವಾದ ಪತ್ರದ ಶೆಡ್ಯೂಲ್ ತೋರಿಸಲಾಗಿ, ಅದರಲ್ಲಿ ಸರ್ವೆ ನಂಬರ್ 8 ಹಿಸ್ಸಾ-3, ವಿಸ್ತೀರ್ಣ 25 ಎಕರೆ 31 ಗುಂಟೆ, ಅದರ ಪೈಕಿ 06 ಎಕರೆ 21 ಗುಂಟೆ, ಸರ್ವೆ ನಂಬರ್ 8 ಹಿಸ್ಸಾ ಕ ಎಂದು ಬರೆದಿದೆ ಎನ್ನುತ್ತಾರೆ. ಈ ದಾವೆಯನ್ನು ಸರ್ವೆ ನಂಬರ್ 8/ಕ, 06 ಎಕರೆ 21 ಗುಂಟೆ ಮೇಲೆ

ಮಾಡಿರುತ್ತಾರೆ, ಸರ್ವೆ ನಂಬರ್ 8/ಬ ಮೇಲೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/ಕ ಜಮೀನಿನಲ್ಲಿ ನಾವು ಭೂ ಸ್ವಾಧೀನ ಮಾಡಿರುವುದಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ 8/ಕ ಜಮೀನನ್ನು ನೀವು ಭೂ ಸ್ವಾಧಿನ ಮಾಡದೇ ಇರುವುದರಿಂದ ಸದರಿ ಜಮೀನಿನಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸರ್ವೆ ನಂಬರ್ 8/ಬ, ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನು ಪಹಣಿ ಜಂಟಿಯಾಗಿ ವಾದಿ ನಂಬರ್ 1 ರಿಂದ 3 ರವರ ಹೆಸರಿನಲ್ಲಿತ್ತು. ಸರ್ವೆ ನಂಬರ್ 8/ಬ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವಾಗ, ಪಹಣಿ ಜಂಟಿಯಾಗಿ ವಾದಿ ನಂಬರ್ 1ರಿಂದ 3 ರವರ ಹೆಸರಿನಲ್ಲಿತ್ತು. ದಾವಾ ಜಮೀನು ಸರ್ವೆ ನಂಬರ್ 8/ಕ ವಿಸ್ತೀರ್ಣ 06 ಎಕರೆ 27 ಗುಂಟೆ ಜಂಟಿಯಾಗಿ ವಾದಿ ನಂಬರ್ 1 ರಿಂದ 3 ಇವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 8/ಬ ಮತ್ತು ಸರ್ವೆ ನಂಬರ್ 8/ಕ ಈ ಎರಡು ಜಮೀನುಗಳ ಜಂಟಿ ಮಾಲೀಖರು ಮತ್ತು ಕಬ್ಜಾದಾರರು ವಾದಿ ನಂಬರ್ 1 ರಿಂದ 3 ಆಗಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/ಬ ಬಗ್ಗೆ ನನಗೆ ಗೊತ್ತಿದೆ ಸರ್ವೆ ನಂಬರ್ 8/ಕ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

3. ಸರ್ವೆ ನಂಬರ್ 8/ಬ, ವಿಸ್ತೀರ್ಣ 06 ಎಕರೆ 27 ಗುಂಟೆ ಇದ್ದು ಇದರಲ್ಲಿ ನಾವು 22 ಗುಂಟೆ ಜಮೀನು ಭೂಸ್ವಾಧಿನಪಡಿಸಿಕೊಂಡಿರುತ್ತೇವೆ. ಸರ್ವೆ ನಂಬರ್ 8/ಬ, ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನು ಭೂ ಸ್ವಾಧೀನಪಡಿಸಿಕೊಳ್ಳುವ ಕಾಲಕ್ಕೆ ಮಾಡಿದ ಜೆ ಎಮ್ ಸಿ ವರದಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ಜೆ ಎಮ್ ಸಿ ವರದಿಯನ್ನು ನೀವು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂಬರ್ 8/ಬ, ರಲ್ಲಿ 22

ಗುಂಟೆ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ಪರಿಹಾರ ಹಣವನ್ನು ವಾದಿ ನಂಬರ್ 1 ರಿಂದ 3 ಜಂಟಿ ಮಾಲೀಕರಿಗೆ ಪಾವತಿ ಮಾಡಿರುತ್ತೇವೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 2 ರಲ್ಲಿ 2ನೇ ಸಾಲಿನಲ್ಲಿ ವಾದಿಯರು ಜಮೀನು ಸರ್ವೆ ನಂಬರ್ 8/ಬ ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನಿನ ಮಾಲೀಖರು ಅಲ್ಲ ಸುಳ್ಳಾಗಿರುತ್ತದೆ ಎಂದು ನಮೂದು ಮಾಡಿದ್ದು, ಮೇಲೆ ಹೇಳಿದಂತೆ ವಾದಿಯರು ಜಮೀನು ಸರ್ವೆ ನಂಬರ್ 85/ಬ, ವಿಸ್ತೀರ್ಣ 06 ಎಕರೆ 27 ಗುಂಟೆ, ಜಮೀನಿನ ಜಂಟಿ ಮಾಲೀಕರು ಇದ್ದರು ಎಂದು ನೀವು ಒಪ್ಪಿಕೊಂಡಿದ್ದೀರಾ ಇದರ ಬಗ್ಗೆ ನೀವು ಏನೂ ವಿವರಣೆ ನೀಡುತ್ತೀರಿ ಎಂದರೆ ಸಾಕ್ಷಿಯು ತಪ್ಪು ತಿಳುವಳಿಕೆಯಿಂದ ಆಗಿರುತ್ತದೆ ಎನ್ನುತ್ತಾರೆ. ಸರ್ವೆ ನಂಬರ್ 85/ಬ, ವಿಸ್ತೀರ್ಣ 06 ಎಕರೆ 27 ಗುಂಟೆ ಮತ್ತು ಸರ್ವೆ ನಂಬರ್ 85/ಕ, ವಿಸ್ತೀರ್ಣ 06 ಎಕರೆ 27 ಗುಂಟೆ, ಎರಡು ಜಮೀನುಗಳಿಗೆ ವಾದಿಯರು ಜಂಟಿ ಮಾಲೀಕರು ಇರುವುದಿಲ್ಲ ಎಂದು ನೀವು ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿ ಬರೆಸಿದ್ದಿರಾ ಎಂದರೆ ಸಾಕ್ಷಿಯು ನಾವು ಭೂಸ್ವಾಧಿನಪಡಿಸಿಕೊಂಡ 22 ಗುಂಟೆ ಜಮೀನು ಮಾತ್ರ ನಮಗೆ ಸಂಬಂಧಪಟ್ಟಿರುತ್ತದೆ ಉಳಿದ ಜಮೀನು ನಮಗೆ ಸಂಬಂಧಪಟ್ಟಿರುವುದಿಲ್ಲ ಎನ್ನುತ್ತಾರೆ.

4. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 3 ರಲ್ಲಿ ವಾದಿಯರು ದಾವಾ ಜಮೀನು ಸರ್ವೆ ನಂಬರ್ 8/ಕ, ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನಿನಲ್ಲಿ ಭೂಸ್ವಾಧೀನ ಆಗಿರುವುದಿಲ್ಲ ಎಂದು ಹೇಳಿರುವ ವಿಷಯ ಸುಳ್ಳಾಗಿರುತ್ತದೆ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/ಬ ನಮಗೆ ಸಂಬಂಧಪಟ್ಟಿರುತ್ತದೆ, ಸರ್ವೆ ನಂಬರ್ 8/ಕ ನಮಗೆ ಸಂಬಂದಪಟ್ಟಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 3 ರಲ್ಲಿ ಸರ್ವೆ ನಂಬರ್ 8/ಕ ಜಮೀನನನ್ನು

ಸರಕಾರದಿಂದ ಭೂಸ್ವಾಧೀನ ಮಾಡಿಕೊಂಡಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/ಬ ಭೂಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಬರೆಯಬೇಕಾಗಿತ್ತು ಎನ್ನುತ್ತಾರೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 3 ರಲ್ಲಿ ನೀವು ತಪ್ಪು ವಿಷಯಗಳನ್ನು ಬರೆಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಸರ್ವೆ ನಂಬರ್ 8/ಬ ಬಗ್ಗೆ ಬರೆಯಿಸಬೇಕಾಗಿತ್ತು ಎನ್ನುತ್ತಾರೆ. ಸರ್ವೆ ನಂಬರ್ 8/ಬ ಮತ್ತು ಸರ್ವೆ ನಂಬರ್ 8/ಕ ಈ ಎರಡು ಜಮೀನುಗಳು ಯಾವ ದಿಕ್ಕಿಗೆ ಬರುತ್ತವೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/ಬ ಪೂರ್ವ ದಿಕ್ಕಿಗೆ ಬರುತ್ತದೆ ಸರ್ವೆ ನಂಬರ್ 8/ಕ ನಮಗೆ ಸಂಬಂಧಪಟ್ಟಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ 8/ಕ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ನನಗೆ ಸಂಬಂಧಪಟ್ಟಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ 8/ಕ ನಿಮಗೆ ಸಂಬಂಧ ಇಲ್ಲದೇ ಇದ್ದರೂ ಸದರಿ ಜಮೀನಿನ ದಕ್ಷಿಣ ಭಾಗದಲ್ಲಿ ನಿಮ್ಮ ಕಂಪನಿಯ ಸಿಬ್ಬಂದಿಯವರು ರಸ್ತೆ ಮಾಡಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸಾಧ್ಯ ಇಲ್ಲ ಅದು ನಮಗೆ ಸಂಬಂಧ ಇಲ್ಲ ಎನ್ನುತ್ತಾರೆ. ಸರ್ವೆ ನಂಬರ್ 8/ಕ ದಲ್ಲಿ ರಸ್ತೆ ನಿರ್ಮಾನ ಮಾಡಬೇಡರಿ ಎಂದು ವಾದಿಯವು ನಿಮ್ಮ ಕಂಪನಿಯವರಿಗೆ ಕೇಳಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/ಬ ದಲ್ಲಿ ರಸ್ತೆ ಮಾಡಿರುತ್ತೇವೆ ಸರ್ವೆ ನಂಬರ್ 8/ಕ ದಲ್ಲಿ ರಸ್ತೆ ಮಾಡಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ 8/ಬ ಮೇಲೆ ವಾದಿಯರು ಈ ದಾವೆಯನ್ನು ಮಾಡಿರುವುದಿಲ್ಲ, ಸರ್ವೆ ನಂಬರ್ 8/ಕ ಜಮೀನಿನಲ್ಲಿ ಒತ್ತುವರಿ ಮಾಡಿ ರಸ್ತೆ ನಿರ್ಮಾಣ ಮಾಡಬೇಡರಿ ಎಂದು ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ಸರ್ವೆ ನಂಬರ್ 8/ಕ ಜಮೀನಿನ ಮೇಲೆ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ನೀವು ಸರಿಯಾಗಿ ದಾವಾ ಆಸ್ತಿ ಸರ್ವೆ

ನಂಬರ್ ಮತ್ತು ವಾದಪತ್ರ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ

- - ಅಸಲು ದಾವೆ ಸಂ: **28/2018** ಡಿ.ಡಬ್ಲು-**3**

ದಿ: **30-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ.ಎಸ್. ವಕೀಲರಿಂದ: -**

1. ನಾನು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತೇನೆ. ನಾನು ನನ್ನ ಅಧಿಕೃತ ಕೆಲಸದ ಮೇರೆಗೆ ಇವತ್ತು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಿಂದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬೇಕೆಂದು ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುವುದಿಲ್ಲ.

ನಿಮಗೆ ಬರವಣಿಗೆಯಲ್ಲಿ ಅಧಿಕಾರಪತ್ರವನ್ನು ನೀಡದೇ ಇದ್ದರೂ ನೀವು ಯಾವ ಆಧಾರದ ಮೇರೆಗೆ ಈ ದಿನ ಕಂಪನಿಯ ಪರವಾಗಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿದ್ದೀರಾ ಎಂದರೆ ಸಾಕ್ಷಿಯು ನನ್ನ ಮೇಲಾಧಿಕಾರಿಗಳು ಮೌಖಿಕವಾಗಿ ಸಾಕ್ಷಿ ನುಡಿಯಲು ತಿಳಿಸಿರುತ್ತಾರೆ. ಮೇಲೆ ಹೇಳಿದ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ನಾನು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯಲ್ಲಿ ನೇಮಕಗೊಂಡು 29 ವರ್ಷ ಆಗಿದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯ ಬರೆದಿದ್ದಾರೆಂದು ನನಗೆ ಗೊತ್ತಿದೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಂಪನಿ ಭೂ ಸ್ವಾಧೀನಪಡಿಸಿಕೊಂಡಿರುವ ರಸ್ತೆಯಲ್ಲಿ ಕಂಪನಿಯ ವಾಹನಗಳು ಓಡಾಡುತ್ತಿವೆ ಎಂದು ಬರೆಸಿದ್ದೀರಾ ಎಂದೆರೆ ಸರಿ. ಊಟಿ ಸೀಮಾಂತರದಲ್ಲಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ರಸ್ತೆಗಾಗಿ ಭೂಸ್ವಾಧಿನಪಡಿಸಿಕೊಂಡಿರುವ ಜಮೀನುಗಳ ಸರ್ವೆ ನಂಬರ್ ನಿಮಗೆ ಹೇಳಲು ಬರುತ್ತಿದೆಯಾ ಎಂದರೆ ಸಾಕ್ಷಿಯು ಸರ್ವೆ ನಂಬರ್ 8/3, 06 ಎಕರೆ 27 ಗುಂಟೆಯಲ್ಲಿ 22 ಗುಂಟೆ ರಸ್ತೆಗಾಗಿ ಭೂಸ್ವಾಧಿನವಾಗಿದೆ ಎನ್ನುತ್ತಾರೆ. ಸರ್ವೆ ನಂಬರ್ 8/3, ಇದರ ಹಳೇ ಸರ್ವೆ ನಂಬರ್ 8/ಬ ಅಂತಾ ಇತ್ತು. ಸರ್ವೆ ನಂಬರ್ 8/3, ರಲ್ಲಿ ಉಳಿದ ಹಿಸ್ಸಾಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ಭೂಸ್ವಾಧಿನಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 8/ಬ, ವಿಸ್ತೀರ್ಣ 06 ಎಕರೆ 27 ಗುಂಟೆ ಪೈಕಿ ಜಮೀನಿನಲ್ಲಿ 22 ಗುಂಟೆ ರಸ್ತೆಗಾಗಿ ಭೂಸ್ವಾಧಿನವಾಗಿದೆ ಎಂದು ನನ್ನ ಮೇಲಾಧಿಕಾರಿ ಜಗನ್‌ಮೋಹನ್‌ರವರು ತಿಳಿಸಿರುತ್ತಾರೆ. ವಾದಿ ನಂಬರ್ 1 ರಿಂದ 3 ರವರು ಯಾವ ದಿನಾಂಕದಂದು ಭೂಸ್ವಾಧಿನವಾದ ಜಾಗದ ಕಬ್ಜಾವನ್ನು ಕೊಟ್ಟಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. 22 ಗುಂಟೆ ಭೂಸ್ವಾದೀನವಾದ ಜಮೀನಿನ ಸ್ವಾಧೀನವನ್ನು ಕೊಟ್ಟಿದ್ದಾರೆ ಜಮೀನಿನ ಚಕ್ ಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 8/ಬ, ವಿಸ್ತೀರ್ಣ 06 ಎಕರೆ 27

ಗುಂಟೆ ಪೈಕಿ ಜಮೀನಿನಲ್ಲಿ 22 ಗುಂಟೆ ರಸ್ತೆಗಾಗಿ ಭೂಸ್ವಾಧಿನವಾಗಿದೆ ಸರ್ವೆ ನಂಬರ್ 8/ಕ ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನಿನಲ್ಲಿ ಭೂಸ್ವಾಧೀನವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 8/ಕ ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನಿನಲ್ಲಿ ನಿಮ್ಮ ಕಂಪನಿಯವರಿಗೆ ರಸ್ತೆ ಮಾಡಲು ಯಾವುದೇ ಅಧಿಕಾರ ಇಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

2. ವಾದಿಯರು ಈ ದಾವೆಯನ್ನು ಸರ್ವೆ ನಂಬರ್ 8/ಕ ವಿಸ್ತೀರ್ಣ 06 ಎಕರೆ 27 ಗುಂಟೆ ಜಮೀನಿನಲ್ಲಿ ನಿಮ್ಮ ಕಂಪನಿಯವರು ರಸ್ತೆ ನಿರ್ಮಾಣ ಪ್ರಯತ್ನ ಪಟ್ಟಿದ್ದಾರೆಂದು ಸಲ್ಲಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಂಪನಿಯ ವಾಹನಗಳು ಭೂಸ್ವಾಧೀನವಾಗಿರುವ ರಸ್ತೆ ಯಲ್ಲಿ ಓಡಾಡುತ್ತವೆ ಎಂದು ಸುಳ್ಳು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ ಎಲ್ಲಾ ವಿಷಯಗಳು ಸುಳ್ಳು ಆಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ